**ಕರ್ನಾಟಕ ಸರ್ಕಾರ**

**ಕಂಪ್ಲೆಂಟ್/ಉಪಲೋಕ್/ಎಂವೈಎಸ್/1295/2021**
**ಪಿಓ.ಎ.ಆರ್.ಇ–5**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ ವೀಧಿ,
ಬೆಂಗಳೂರು_ದಿನಾಂಕ :01/02/2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ: (1) ಶ್ರೀ.ಜಿ. ಶ್ರೀನಿವಾಸ ಶೆಟ್ಟಿ ಬಿನ್ ಗೋವಿಂದ ಶೆಟ್ಟಿ, ಸಹಾಯಕ ಕಂದಾಯ ಅಧಿಕಾರಿ, ಕೆ.ಹೆಚ್.ಬಿ. ಮಂಗಳೂರು,**

**(2) ಶ್ರೀ. ವಿಜಯಕುಮಾರ್ ಭಂಡಾರಿ ಬಿನ್ ನಾಗಯ್ಯ ಭಂಡಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹಚ್.ಬಿ. ಮಂಗಳೂರು.**

ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ಮಂಗಳೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **(1) ಶ್ರೀ.ಜಿ. ಶ್ರೀನಿವಾಸ ಶೆಟ್ಟಿ ಬಿನ್ ಗೋವಿಂದ ಶೆಟ್ಟಿ, ಸಹಾಯಕ ಕಂದಾಯ ಅಧಿಕಾರಿ, ಕೆ.ಹೆಚ್.ಬಿ. ಮಂಗಳೂರು, (2) ಶ್ರೀ.ವಿಜಯಕುಮಾರ್ ಭಂಡಾರಿ ಬಿನ್ ನಾಗಯ್ಯ ಭಂಡಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹಚ್.ಬಿ. ಮಂಗಳೂರು** (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ.ಗಂಗಾಧರ್ ಕೆ. ಬಿನ್ ಕೊರಗಪ್ಪ ಮೇಸ್ತ್ರಿ, ಆದ್ಯಪಾಡಿ, ಬಜ್ಪೆ, ಮಂಗಳೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ದೂರಿನಲ್ಲಿ ದೂರುದಾರರ ಅಜ್ಜ ತೋಮ ಮುಖಾರಿಯವರ ಮಾಲಿಕತ್ವದ ಸುರತ್ಕಲ್‌ನ ಕೃಷ್ಣಪುರ 7ನೇ ಬ್ಲಾಕಿನಲ್ಲಿರುವ ಸೈಟ್ ನಂ.154 ಇದರ ಮೇಲೆ ಸಾಲ ತೆಗೆದುಕೊಂಡಿದ್ದು, ಸಾಲ ಮರುಪಾವತಿ ಮಾಡಿದ್ದು, ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ವಾಪಸ್ಸು ಕೊಡಲು ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ಮಂಗಳೂರು ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ.13/2018 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು

ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7(ಎ), 7(ಬಿ)ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 10,000/- ರೂ. ಲಂಚ ಪಡೆದು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(1) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಗಂಗಾಧರ್ ಕೆ. ಬಿನ್ ಕೊರಗಪ್ಪ ಮೇಸ್ತ್ರಿ, ಆದ್ಯಪಾಡಿ, ಬಜ್ಪೆ, ಮಂಗಳೂರು** ಇವರು ತಮ್ಮ ಅಜ್ಜ ತೋಮ ಮುಖಾರಿಯವರ ಮಾಲಿಕತ್ವದ ಸುರತ್ಕಲ್‌ನ ಕೃಷ್ಣಪುರ 7ನೇ ಬ್ಲಾಕಿನಲ್ಲಿರುವ ಸೈಟ್ ನಂ.154 ಇದರ ಮೇಲೆ 4,000/- ರೂ. ಸಾಲ ಪಡೆದುಕೊಂಡಿದ್ದು, ಸದರಿ ಸಾಲವನ್ನು ಸದರಿಯವರ ಮಗನಾದ ಕೃಷ್ಣರವರು ಅಸಲು ಮತ್ತು ಬಡ್ಡಿ ಸೇರಿ 9,910/- ರೂ.ಗಳನ್ನು ತುಂಬಿದ್ದು, ಅದಕ್ಕೆ ಸಂಬಂಧಿಸಿದ ಯಾವತ್ತೂ ದಾಖಲೆಗಳನ್ನು ವಾಪಸ್ಸು ಕೊಡುವಂತೆ ಕೇಳಲಾಗಿ, ಎದುರುದಾರರು ಸೈಟ್ ನೋಡಲು ಬರುವುದಾಗಿ ತಿಳಿಸಿದ್ದು, ಆ ಪ್ರಕಾರ ಎದುರುದಾರರು ಸೈಟ್ ನೋಡಲು ಬಂದಾಗ ಕೃಷ್ಣರವರಿಗೆ 25,000/- ಲಂಚ ನೀಡುವಂತೆ ಬೇಡಿಕೆ ಇಟ್ಟಿರುತ್ತಾರೆ. ನಂತರ ದಿ: 27/09/2018ರಂದು ದೂರುದಾರರು ಎದುರುದಾರರ ಕಛೇರಿಗೆ ಹೋದಾಗ ಇಬ್ಬರೂ ಎದುರುದಾರರು ಕಛೇರಿಯಲ್ಲಿ ಹಾಜರಿದ್ದು, ಮೂಲ ದಾಖಲೆಗಳನ್ನು ಹಿಂತಿರುಗಿಸಲು 15,000/- ರೂ. ಬೇಡಿಕೆ ಇಟ್ಟು ಅಂತಿಮವಾಗಿ 12,000/- ರೂ.ಗಳಿಗೆ ಇಬ್ಬರೂ ಒಪ್ಪಿಕೊಂಡಿದ್ದು, 2ನೇ ಎದುರುದಾರರು ಆ ದಿನ ಮುಂಗಡವಾಗಿ 2,000/- ರೂ.ಗಳನ್ನು ಪಡೆದುಕೊಂಡಿರುತ್ತಾರೆ. ಎದುರುದಾರರ ಲಂಚದ ಬೇಡಿಕೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:28/09/2018ರಂದು ಮಂಗಳೂರು ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ. 13/2018 ರಲ್ಲಿ ಕಲಂ 7(ಎ), 7(ಬಿ) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಎ. ಮಹೇಶ್ ಕುಮಾರ್ (ನೆರಳುಸಾಕ್ಷಿ), 2) ವಿಜಯ್ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ತಮ್ಮ ಮೊಬೈಲನ್ನು ಹಾಜರುಪಡಿಸಿದ್ದು ಅದರಲ್ಲಿರುವ

ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 2000*3 ಮತ್ತು 500*8) ಒಟ್ಟು 10,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-1 ಮಹೇಶ್ ಕುಮಾರ್‌ರವರ ಮೂಲಕ ದೂರುದಾರರ ಕಿಸೆಯಲ್ಲಿ ಇಡಿಸಿರುತ್ತಾರೆ. ನಂತರ ಮಹೇಶ್ ಕುಮಾರ್ ಇವರ ಎರಡು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರನ ವೈಶಿಷ್ಟ್ಯತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಮಹೇಶ್ ಕುಮಾರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ತಲೆಯನ್ನು ಕೈಯಿಂದ ಸವರಿಕೊಳ್ಳುವ ಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರ್ ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 28-09-2018ರಂದು ಮಧ್ಯಾಹ್ನ 2.30ರಿಂದ 4.30 ಘಂಟೆಯವರೆಗೆ ಮಂಗಳೂರು ಎಸಿಬಿ ಕಛೇರಿಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ದೂರುದಾರರು ಹಾಗೂ ಪಂಚರು, ಎದುರುದಾರರ ಕೆ.ಹೆಚ್.ಬಿ ಕಾರ್ಯಾಲಯದ ಹತ್ತಿರ 5 ಘಂಟೆಗೆ ಬಂದಿದ್ದು ದಾಳಿ ತಂಡದವರು ಗೌಪ್ಯವಾಗಿ ಕಾರ್ಯಾಲಯದ ಆವರಣದಲ್ಲಿ ಸುತ್ತಮುತ್ತಲೂ ಸಂಶಯಬರದಂತೆ ನಿಂತಿದ್ದು, ದೂರುದಾರರನ್ನು ಹಾಗೂ ಅವರ ಸಹೋದರ ಸತೀಶ್ ಮತ್ತು ನೆರಳು ಸಾಕ್ಷಿ ಮಹೇಶ್ ಕುಮಾರ್ ಇವರನ್ನು ಕಛೇರಿಯ ಒಳಗೆ ಕಳುಹಿಸಿದ್ದು, 1ನೇ ಎದುರುದಾರರು ಕಛೇರಿಯಲ್ಲಿ ಹಾಜರಿದ್ದು, ಹಣದ ಬಗ್ಗೆ ಕೇಳಿ, ಸದರಿ ಹಣವನ್ನು ಕವರಿನಲ್ಲಿ ಹಾಕಿಕೊಡಲು ತಿಳಿಸಿ, ದೂರುದಾರರ ಮೂಲ ದಾಖಲೆಗಳನ್ನು ನೀಡಿರುತ್ತಾರೆ. ನಂತರ ದೂರುದಾರರು ತನ್ನ ಮೊಬೈಲ್‌ನಿಂದ 2ನೇ ಎದುರುದಾರರಿಗೆ ಫೋನ್ ಮಾಡಿ 10,000/- ರೂ.ಗಳನ್ನು 1ನೇ ಎದುರುದಾರರಿಗೆ

ನೀಡಿದ ಬಗ್ಗೆ ತಿಳಿಸಿದ್ದು, ಅದಕ್ಕೆ ಆಯ್ತು ಎಂದು ನುಡಿದು ಲಂಚಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದ್ದಾರೆ. 1ನೇ ಎದುರುದಾರರು ಹಣ ಪಡೆದುಕೊಂಡ ನಂತರ ಸತೀಶ್ ರವರು ತನಿಖಾಧಿಕಾರಿಗೆ ತಲೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಿದ್ದು, ತಕ್ಷಣ ತನಿಖಾಧಿಕಾರಿಗಳು 1ನೇ ಎದುರುದಾರರ ಕಛೇರಿಗೆ ಬಂದು ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ 1ನೇ ಎದುರುದಾರರಿಗೆ ತಿಳಿಸಿರುತ್ತಾರೆ. 2ನೇ ಎದುರುದಾರರ ಬಗ್ಗೆ ವಿಚಾರಿಸಲಾಗಿ ಸೈಟ್ ನೋಡಲು ಹೋಗಿರುವುದಾಗಿ ತಿಳಿಸಿರುತ್ತಾರೆ. ಲಂಚದ ಹಣವನ್ನು ಬೇರೊಂದು ಕವರಿನಲ್ಲಿ ಹಾಕಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಪ್ರಶಾಂತ್ ಪೋಲಿಸ್ ಸಿಬ್ಬಂದಿ ಇವರ ಮೊಬೈಲಿಗೆ 1ನೇ ಎದುರುದಾರರ ಸಿಮ್ಮನ್ನು ಹಾಕಿ 2ನೇ ಎದುರುದಾರರಿಗೆ ಫೋನ್ ಮಾಡಿಸಲಾಗಿ, ಅದರ ಸಂಭಾಷಣೆಯನ್ನು ಫೋನಿನಲ್ಲಿ ರೆಕಾರ್ಡ ಮಾಡಿಕೊಳ್ಳಲಾಗಿರುತ್ತದೆ. ದೂರುದಾರರು 2ನೇ ಎದುರುದಾರರೊಂದಿಗೆ ಮಾತನಾಡಿದ ಹಾಗೂ 1ನೇ ಎದುರುದಾರರು 2ನೇ ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಂದ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಮುಂದುವರೆದು ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಸಂಪೂರ್ಣ ಕಡತವನ್ನು, ಹಾಜರಾತಿ ಪುಸ್ತಕ ಮತ್ತು ದೂರುದಾರರಿಗೆ ನೀಡಿದ ಮೂಲ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಪಡೆದುಕೊಂಡಿರುತ್ತಾರೆ. ಕಛೇರಿಯ ಎಫ್.ಡಿ.ಎ. ಆದ ಹರೀಶ್‌ಕುಮಾರವರು ಮುದ್ರಿತ ಧ್ವನಿಯನ್ನು ಕೇಳಿ ಸದರಿ ಧ್ವನಿಗಳು ಎದುರುದಾರರವರದೆಂದು ಗುರುತಿಸಿರುತ್ತಾರೆ. 1ನೇ ಎದುರುದಾರರ ಟೇಬಲ್ ಡ್ರಾಅನ್ನು ತಪಾಸಣೆ ಮಾಡಲಾಗಿ ಅದರಲ್ಲಿ 50/- ರೂ.ಗಳ 60 ನೋಟುಗಳು ಅಂದರೆ 3,000/- ರೂ.ಗಳು ದೊರೆತಿದ್ದು, ಸದರಿ ಹಣವನ್ನು ಸಾಕ್ಷಿ 8 ಮತ್ತು 9 ರವರಿಂದ ತಲಾ 1,500/- ರಂತೆ ಪಡೆದುಕೊಂಡಿದ್ದು, ಸಾಕ್ಷಿ 8 ಮತ್ತು 9 ರವರ ಅಮ್ಟಾಡಿ ಗ್ರಾಮಪಂಚಾಯಿತಿ ಶುಲ್ಕ ಬಾಬತ್ತು ಕ್ರಮವಾಗಿ 258/- ಹಾಗೂ 281/- ರೂ. ತುಂಬಿದ್ದು, ಉಳಿದ 2,461/- ರೂ. ಹಣವನ್ನು ಲಂಚವಾಗಿ ಪಡೆದಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ:28/09/2018ರಂದು ಸಾಯಂಕಾಲ 5.25 ರಿಂದ ರಾತ್ರಿ 9 ಗಂಟೆಯವರೆಗೆ ಮಂಗಳೂರು ಕೆ.ಹೆಚ್.ಬಿ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ಸಿಡಿಗಳಲ್ಲಿ ಸಂಗ್ರಹಿಸಿದ ಪ್ರಶ್ನಿತ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1ನೇ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. 1 ಮತ್ತು 2ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಜಾರಿಮಾಡಿದ್ದು, ಸದರಿಯವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತನಿಖಾ ವರದಿ ಹಾಗೂ ಪರಿವೀಕ್ಷಣಾ ಟಿಪ್ಪಣಿಯಲ್ಲಿಯ ಅಂಶಗಳು ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತವೆ. ಶಿಸ್ತು ಕ್ರಮ ಜರುಗಿಸಿರುವುದು ಕಾನೂನಿಗೆ ಅನುಗುಣವಾಗಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 3ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣವು ಸಾಕ್ಷಿ ವಿಚಾರಣಾ ಹಂತಕ್ಕೆ ಬಂದಿರುತ್ತದೆ. ಈ ಹಂತದಲ್ಲಿ ತಾನು ಸಮಜಾಯಿಷಿಯನ್ನು ನೀಡಿದ್ದಲ್ಲಿ ತಾನು ನಿರ್ದೋಷಿ ಎಂದು ರುಜುವಾತು ಮಾಡುವ ಅಂಶಗಳನ್ನು ಮುಂಚಿತವಾಗಿ ಬಹಿರಂಗಪಡಿಸಿದಂತೆ ಆಗಿ ನನ್ನ ಹಕ್ಕು ಉಲ್ಲಂಘನೆಯಾಗುತ್ತದೆ. ಆದ್ದರಿಂದ ಸತ್ರ ನ್ಯಾಯಾಲಯದಲ್ಲಿ ಬಾಕಿಯಿರುವ ಕ್ರಿಮಿನಲ್ ಮೊಕದ್ದಮೆ ಮುಕ್ತಾಯವಾದ ನಂತರ ತನಗೆ ಸಮಜಾಯಿಷಿಯನ್ನು ನೀಡಲು ಅವಕಾಶ ಮಾಡಿಕೊಡಬೇಕೆಂದು ಕೋರಿದ್ದಾರೆ.

ಅದೇ ಪ್ರಕಾರ 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ದೂರುದಾರರಿಗೆ ಯಾವುದೇ ಲಂಚದ ಬೇಡಿಕೆ ಇಟ್ಟಿರುವುದಿಲ್ಲ. ಪರಿವೀಕ್ಷಣಾ ಟಿಪ್ಪಣಿ ದಿ: 17/07/2021 ರಲ್ಲಿ ಆಪಾದಿಸಿದ ಆಪಾದನೆಗಳು ಸತ್ಯಕ್ಕೆ ದೂರವಾಗಿರುತ್ತವೆ. ನಾನು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಯಾವುದೇ ಪುರಾವೆಗಳಿಲ್ಲ. ಪ್ರಕರಣದಲ್ಲಿರುವ ಸಂಭಾಷಣೆಯು ತನ್ನದೋ ಅಥವಾ ಬೇರೆಯವರದೋ ಎಂಬುದು ಸತ್ರ ನ್ಯಾಯಾಲಯದ ತೀರ್ಪಿನಿಂದ ಗೊತ್ತಾಗುತ್ತದೆ. ಸತ್ರ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿಯಿರುವುದರಿಂದ ಈ ಹಂತದಲ್ಲಿ ಸಮಜಾಯಿಷಿ ಸಲ್ಲಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಹೇಳಿದ ಆಪಾದನೆಗಳನ್ನು ಅಲ್ಲಗಳೆಯುತ್ತೇನೆ. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣವು ಮುಕ್ತಾಯವಾಗುವವರೆಗೆ ಈ ಪ್ರಕರಣದ ನಡವಳಿಗಳನ್ನು ಮುಂದೂಡಬೇಕೆಂದು ಕೋರಿಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷಾದಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ

ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ. ಸತ್ರ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುವ ಪ್ರಕರಣವು ಮುಕ್ತಾಯವಾಗುವವರೆಗೆ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಸಲ್ಲಿಸುವುದನ್ನು ಮುಂದೂಡಲು ಸಾಧ್ಯವಿಲ್ಲ. ಇಲಾಖಾ ವಿಚಾರಣೆ ನಡೆಯುವ ಕಾಲಕ್ಕೆ ಎದುರುದಾರರಿಗೆ ಡಿಫೆನ್ಸ್ ಬಹಿರಂಗಪಡಿಸಲು ತೊಂದರೆಯಾದ್ದಲ್ಲಿ, ಇಲಾಖಾ ವಿಚಾರಣೆಯನ್ನು ಸ್ಥಗಿತಗೊಳಿಸಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವು ಸಂಜಸವಾಗಿರುವುದಿಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಪುರಾವೆಗಳನ್ನು ಪರಾಮರ್ಶಿಸಲಾಗಿ ಎದುರುದಾರರು ಭ್ರಷ್ಟಾಚಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಆದ್ದರಿಂದ, ಎದುರುದಾರರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸುವುದು ನ್ಯಾಯತಾ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ.

5. ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ, ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

1/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.